(ದಿನಾಂಕಃ 12-04-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಪಾಟಿ ಸವಾಲು ಃ ಶ್ರೀ ಜೆ.ಎಲ್.ಎಸ್. ಪ್ರತಿವಾದಿ ಪರ ವಕೀಲರಿಂದ -

ನಾನು ಶಿಕ್ಷಣ ಕಲಿತಿಲ್ಲ. ನನಗೆ ಕನ್ನಡ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ. ಸರ್ವೆ ನಂ. 22/3 ರ ಉತಾರ ನೋಡಿರುತ್ತೇನೆ. ಒಟ್ಟು ಕ್ಷೇತ್ರ 1 ಎಕರೆ 1 ಗುಂಟೆ ಇರುತ್ತದೆ. ಪೂರ್ವಕ್ಕೆ ಹಗೆದಾಳ ಸಂಗಪ್ಪ ಇವರ ಜಮೀನು , ಪಶ್ಚಿಮಕ್ಕೆ ಕಚ್ಚಾ ರಸ್ತೆ , ಉತ್ತರಕ್ಕೆ ದಾದಾಸಾಬ ತಹಶೀಲ್ದಾರ ಇವರ ಜಮೀನು, ದಕ್ಷಿಣಕ್ಕೆ ಯಲ್ಲಪ್ಪಾ ಆಡಿನರವರ ಹೊಲ ಇರುತ್ತದೆ. ಸರ್ವೆ ನಂ. 22/3 ರ ಒಟ್ಟು ಕ್ಷೇತ್ರ 1 ಎಕರೆ 1 ಗುಂಟೆಗೆ ನಾವು ಮೋಜಣಿ ಮಾಪು ಮಾಡಿಸಿರುವುದಿಲ್ಲ. ಪ್ರತಿವಾದಿಯ ಮನೆಯ ಮುಂದೆ ಇದೇ ಸರ್ವೆ ನಂಬರದಲ್ಲಿ ದಕ್ಷಿಣೋತ್ತರವಾಗಿ ಗುಟಗುದ್ದಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಹಾತ್ ನಕಾಶೆಯಲ್ಲಿ ಮನೆಯ ಮುಂದೆ ಖುಲ್ಲಾ ಜಾಗ ಇದ್ದು ನಂತರ ಗಟಾರ ಇದ್ದು ಅದಕ್ಕೆ ಹೊಂದಿಕೊಂಡು ರಸ್ತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದ್ರಿ ಖುಲ್ಲಾ ಜಾಗ ನಮಗೆ ಸೇರಿದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ.

ಇದೇ ಸರ್ವೆ ನಂಬರಿನಲ್ಲಿ ಬೇರೆ 20 ಜನರ ಮನೆಗಳು ಇವೆ ಎಂದರೆ ಸರಿ . ಆದರೆ ನಾವು ಪ್ರತಿವಾದಿ ವಿರುದ್ಧ ಮಾತ್ರ ಕೇಸು ಹಾಕಿರುತ್ತೇವೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ